ಒ.ಎಸ್. ನಂ.165/2014
ಪಿಡಬ್ಲು-1

ದಿನಾಂಕ 19.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>**

ನಾನು ನಾಗಪ್ಪನ ಮೇಲೆ ದಾವೆ ಸಲ್ಲಿಸಿರುತ್ತೇನೆ ಆದರೆ ಉಳಿದ ಪ್ರತಿವಾದಿಯರ ವಿರುದ್ದ ದಾವೆ ಸಲ್ಲಿಸಿಲ್ಲ. ನಾಗಪ್ಪನ ಹೆಸರಿನಲ್ಲಿ ಆಸ್ತಿಗಳಿದ್ದ ಬಗ್ಗೆ ಸಂಬಂಧಪಟ್ಟ ಪಂಚಾಯತಿಯಲ್ಲಿ ಪರಿಶೀಲಿಸಿಲ್ಲ ಎಂದರೆ ಸರಿ. ನಾಗಪ್ಪನ ಹೆಸರಿನಲ್ಲಿ ಆಸ್ತಿ ನಂ.3-236-/1 ಪಂಚಾಯತಿಯಲ್ಲಿರುತ್ತದೆ ಎಂದರೆ ಸರಿಯಲ್ಲ. ನಾಗಪ್ಪನ ಹೆಸರಿನಲ್ಲಿ ಆಸ್ತಿ ಇಲ್ಲ ಎಂಬ ಬಗ್ಗೆ ಸಂಬಂಧಪಟ್ಟ ಪಂಚಾಯತಿಯಿಂದ ದಾಖಲೆ ಪಡೆದಿಲ್ಲ. ಆಸ್ತಿ ನಂ.3-236-/1 ಕ್ಕೆ ಸಂಬಂಧಿಸಿದಂತೆ 1ನೆ ಪ್ರತಿವಾದಿ ತೆರಿಗೆ ಪಾವತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಯಾವ ಸರ್ವೆ ನಂಬರನಲ್ಲಿ ಇದೆ ಎಂದು ನನ್ನ ವಾದ ಪತ್ರದಲ್ಲಾಗಲಿ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

1ನೆ ಪ್ರತಿವಾದಿಯ  ವಿರುದ್ದ ಮೇಲ್ಮನವಿ ಯಾವ ವಿಷಯವಾಗಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ 1ನೆ ಪ್ರತಿವಾದಿ ನನ್ನ ಜಾಗದಲ್ಲಿ ಅಂಗಡಿ ಇಟ್ಟ ಕುರಿತು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಒಟ್ಟಾರೆಯಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ